# ಬಾಲ್ಯದ ನೆನಪು

■ ಸಿದ್ದಲಿಂಗಪ್ಪ ಬೀಳಗಿ, ಹುನಗುಂದ

ಕಲೆ: ಸಂತೋಷ್ ಸಸಿಹಿತ್ಲು

ಎಂಥ ಚೆಂದಿತ್ತ ನಮ್ಮಯ ಬಾಲ್ಯ
ಬರೆಯಬಹುದು ಮಹಾಕಾವ್ಯ
ಎಲ್ಲಕೂ ಬರೀ ತುಂಟಾಟ
ನೆನಪಿನ ಬುತ್ತಿಯು ಬೊಂಬಾಟ

ಬೆಳ್ಳಂಬೆಳಗ್ಗೆ ಏಳಲು ಬೇಜಾರು
ಮನೆ ಮಂದಿಯ ತಕರಾರು
ಕುಂಡಿಯ ಮೇಲೆ ಬಿದ್ದರೆ ಏಟು
ಹಾಸಿಗೆ ತುಂಬ ಹಾರಾಟ

ಇದ್ದಿಲು ಪುಡಿಯಲಿ ಹಲ್ಲುಜ್ಜಿ
ಅಂಗಿಯ ಚುಂಗಲಿ ಕಣ್ಣುಜ್ಜಿ
ಊಟವು ಚಂದ ಮಾಳಿಗೆ ಏರಿ
ನಗುವಿಗೆ ಕಾರಣ ಜೊಲ್ಲಿನ ಮಾರಿ

ಆಟಕೆ ಕರೆದರೆ ಸದಾ ತಯಾರಿ
ಚಿನ್ನಿದಾಂಡು ಮರಕೋತಿ ಲಗೋರಿ
ಹತ್ತಿ ಸುಗ್ಗಿಗೆ ಕರದಂಟು ಖಜೂರಿ
ಪಗಡಿ ಕೌದಿಯು ಕುಶನ್ ಗಾದಿ

ಬಂದರೆ ಸಾಕು ಬರ್ಫಿನ ಗಾಡಿ
ಬಟ್ಟಲು ಹಿಡಿದು ನಾವು ರೆಡಿ
ಕೊಟ್ಟರೆ ಸಾಕು ನಾಲ್ಕಾಣೆ
ಅಂಗೈ ನಾಲಿಗೆ ಕೆಂಬಣ್ಣ

ಬಾಂಬೆ ಮಿಠಾಯಿ ಅಜ್ಜನ ಕೂಗು
ವಾಚು ಉಂಗುರ ಕಟ್ಟುವ ಮೋಜು
ಗರ್ದಿ ಗಮ್ಮತ್ತು ಬಣ್ಣದ ಡಬ್ಬಿ
ನೋಡುತ್ತಿದ್ದೆವು ಉಬ್ಬುಬ್ಬಿ

ಪೋಲಿ ಹುಡುಗರ ಆಟೋಟ
ಓಣಿ ಮಂದಿಯ ರಂಪಾಟ
ಪೊಲೀಸು ಮಾಮ ಕಂಡರೆ ಸಾಕು
ಓಡುತ್ತಿದಿದ್ದೆವು ದಿಕ್ಕೆಟ್ಟು

ಮಾಸ್ತರು ಕಾಣಲು ಶಾಲೆಗೆ ಓಟ
ಲೆಕ್ಕವ ತಪ್ಪಲು ಬಡಿಗೆ ಏಟ
ಪಾಠದಿ ಮನಸು ತಲ್ಲೀನ
ಗುರು ನಮಗಾಗ ದೇವಸಮಾನ



## ಕುಂಚ ಪ್ರಪಂಚ

**ಶ್ರಾವಣಿ**
10ನೇ ತರಗತಿ,
ಚಿಕ್ಕಮಗಳೂರು





**ಶ್ಲೋಕ್ ಭಾಗವತ್**
1ನೇ ತರಗತಿ, ಬ್ರಿಗೇಡ್ ಸ್ಕೂಲ್,
ಬೆಂಗಳೂರು



